ಇಸ್ತಿಹಾರ್.

ಬೆಂಗಳೂರುನಲ್ಲಿ ಇರುವ ಮೈಸೂರು ಸ್ಟೇಟ್ ಹುಜೂರು ಖಜಾನೆಯಲ್ಲಿ ಭಂಗಾರದ ಹಣಗಳು ವರಹಾಗಳು ಮತ್ತು ನಗಗಳು ಹರಾಜು ಮಾಡಲ್ಪಡುವದು.

ಮೈಸೂರು ಗ್ವರ್ಮೆಂಟ್ ನಂ. 16644-7—Mis. 2555, 1903ನೇ ಇಸವಿ ಮೇ ತಿಂಗಳು 23ನೇ ತಾರೀಖಿನ ಪ್ರೊಸಿಡಿಂಗ್ಸ್‌ನಲ್ಲಿ ಅಪ್ಪಣೆ ಆಗಿ ಇರುವದನ್ನು ಅನುಸರಿಸಿ ಈ ಕೆಳಗೆ ನಮೂದಿಸಿರುವ ಹಣಗಳು ವರಹಗಳು ನಗಗಳು 1903ನೇ ಇಸವಿ ಜುಲೈ ತಾರೀಖು 8ರಲ್ಲು ಮಧ್ಯಾನ್ಹ 2 ಘಂಟೆ ಲಾಗಾಯಿತು ಹರಾಜು ಮಾಡಲ್ಪಡುತ್ತೆಂದು ಈ ನೋಟಿಸ್ ಮೂಲಕ ಪ್ರಸಿದ್ಧಪಡಿಸಿ ಇರುತ್ತೆ.

ತಪಶೀಲ್.

ಜಗಲೂರು ತಾಲ್ಲೂಕು ಚಳಕಟ್ಟೆ ಗ್ರಾಮದಲ್ಲಿ ವಡ್ಡರ ಹುಲಿಯ ಎಂಬುವನು ಅವನ ಹೊಲ ಉಳುವಾಗ ದೊರಕಿದ್ದು.	(I)	441 ಭಂಗಾರದ ಹಣಗಳು, ಬೋರ್ (ಹಂದಿ ತಲೆ) ಸ್ಟ್ಯಾಂಪು ಉಳ್ಳದ್ದು.
	1	ಜೊತೆ ಭಂಗಾರದ ಕಡಗಗಳು 2—15—6 ತೂಕವುಳ್ಳದ್ದು.
	1	ಭಂಗಾರದ ಅಸಲಿ (ಕತ್ತಿನ ಆಭರಣ) ತೂಕ 1—15—0.
	1	ಡಿಟೋ ತೂಕ ರೂ. 1—0—0 ಬಂದು ಗುಲಗಂಜಿ ತೂಕ.
	2	ಭಂಗಾರದ ಉಂಗರಗಳು ತೂಕ 15 ಆಣೆಗೆ ಬಂದು ಗುಲಗಂಜಿ (ವಳಪಡಿ).
ಹೊಳಲಕೆರೆ ತಾಲ್ಲೂಕು ಸಾಸಲ್ಲಿ ಗ್ರಾಮದಲ್ಲಿ ಸರಕಾರಿ ಸರ್ವೆ 35ನೇ ನಂಬರ್ ಜಮೀನಿನಲ್ಲಿ ಇರುವ ಕಲ್ಲಿನ ಬಳಿ ಬೇಗಾರ್ ಹುಡಗಿ ಜೆನ್ನಿಗೆ ದೊರಕಿದ್ದು.		67 ಭಂಗಾರದ ವರಹಾಗಳು ಅನೇಕಮಾದ್ರಿಉಳ್ಳದ್ದು.

ಹರಾಜು ನಿಬಂಧನೆಗಳು.

I. ನಾಣ್ಯಗಳು ಮತ್ತು ನಗಗಳು ತೆಗದುಕೊಳ್ಳುವರು ಹರಾಜಿನ ಹಣ ನಗದು ಪಾವತಿಮಾಡಿ ಪಡಿಯತಕ್ಕದ್ದು.

II. ಸವಾಲ್ ತಿರಸ್ಕಾರ ಮಾಡಿದ ಬಗ್ಗೆ ಕಾರಣ ತಿಳಿಯಪಡಿಸುವದಿಲ್ಲ.

III. ಹರಾಜಿನ ನಿಬಂಧನೆ ವಿಷಯದಲ್ಲಿಯೂ ಖಾಯಂಮಾಡುವ ವಿಷಯದಲ್ಲಿಯೂ ತಿರಸ್ಕರಿಸುವ ವಿಷಯದಲ್ಲಿಯೂ ಈ ಕೆಳಗೆ ರುಜು ಮಾಡಿ ಇರುವವರು ಪೂರಾ ಅಧಿಕಾರ ವುಳಿಸಿಕ್ಕೊಂಡು ಇರುತ್ತಾರೆ.

ಬಿ. ಗೋಪಾಲಯ್ಯಂಗಾರ್,
ಆಫೀಸರ್ ಇನ್‌ಚಾರ್ಜ್, ಸ್ಟೇಟ್ ಹುಜೂರ್ ಟ್ರೆಜರಿ.

ಬೆಂಗಳೂರ್ ಗೌರ್ಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್—ಬ ತಾರೀಖು 15ನೇ ಜೂನ್ 1903.

ಇದರಡಿ ನಮೂದಿಸಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ :—

				ರೂ. ಆ. ಪೈ.
1.	ಕನ್ನಡ ಲೇಖನ ಪುಸ್ತಕ	6ನೇ ನಂಬರ್	... ..	0—1—0
2.	ಡಿಟೋ	7ನೇ ಡಿಟೋ	.. ..	0—1—6
3.	ಕನ್ನಡ ಬಾಲಬೋಧೆ	IIನೇ ಭಾಗ	.. ....	0—2—6

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.